ಜಯದೇವ ಹಲಕಿ, ಗೋಕಾಕ
*ಕನ್ನಡ ಚಲನಚಿತ್ರದ ಹೆಸರು 'Goa'. ಇದು ಎಷ್ಟರಮಟ್ಟಿಗೆ ಸರಿ?*




ಎರಡು ವಿಧದಲ್ಲೂ ಸರಿ. ಚಿತ್ರ ಚೆನ್ನಾಗಿದ್ದರೆ great overall appreciation; ಚೆನ್ನಾಗಿಲ್ಲದಿದ್ದರೆ Get out, audience!

ಎಚ್.ಆರ್. ದೇಸಾಯಿ, ರಾಯಚೂರು
*ನಾವು ಪರದೇಶಕ್ಕೆ ಹೋಗಲು ವೀಸಾ ಬೇಕು; ಸ್ವರ್ಗಕ್ಕೆ ಹೋಗುವವರಿಗೂ ವೀಸಾ ಬೇಕಾ?*
ಬೇಕು. ಬಂಧುಬಳಗ ಅಂತಿಮದರ್ಶನಕ್ಕೆ ಬಂದು we saw ಅಂದ ನಂತರವೇ ಪ್ರಯಾಣ.

ಬೆಳ್ಳಾವೆ ರಮೇಶ್, ಬೆಂಗಳೂರು
*ಪ್ರಶ್ನೆಯಾಗಿಯೇ ಉಳಿಯುವ ಪ್ರಶ್ನೆ ಯಾವುದು?*
'ಇವಳನ್ನ/ಇವರನ್ನ ಏನೂಂತ ಮದುವೆಯಾದೆ ನಾನು?' ಎಂಬ ಪ್ರಶ್ನೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಯೋಗ; ಇದರ ನಿಜವಾದ ಅರ್ಥ?*
ಯೋ – ಯೋಗ್ಯವಾದುದರತ್ತ, ಗ – ಗಮನ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಬಂದ್ ನಡೆದಾಗ ಪ್ರತಿಭಟನಕಾರರು ಟೈರ್‌ಗಳನ್ನೇ ಏಕೆ ಸುಡುತ್ತಾರೆ?*




ಪ್ರತಿಭಟನೆಗೆ ಒಳ್ಳೆಯ ಮೈಲೇಜ್ ಕೊಡುತ್ತದಂತೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ
*ಅನ್ನಭಾಗ್ಯದ ಅಕ್ಕಿ, ಎಣ್ಣೆಗಳನ್ನು ಬಡವರು ಹೆಚ್ಚಿನ ಬೆಲೆಗೆ ಮಾರಿಕೊಳ್ಳುತ್ತಿದ್ದಾರಲ್ಲ ಸಾರ್?*
ಅದು ಒಂದು ಬ್ರ್ಯಾಂಡ್ ಎಣ್ಣೆ ಕೊಟ್ಟು ಇನ್ನೊಂದು ಬ್ರ್ಯಾಂಡ್ ಎಣ್ಣೆ ಪಡೆಯುವ ಸ್ಕೀಂ ಅಂತೆ!

ವೈ.ಜಿ. ನರಸಿಂಹನ್, ಶಿವಮೊಗ್ಗ
*ಚಿಕ್ಕಮಕ್ಕಳ ತುಂಟಾಟಕ್ಕೂ, ದೊಡ್ಡವರ ಕಿತ್ತಾಟಕ್ಕೂ ಏನು ವ್ಯತ್ಯಾಸ?*
ತುಂಟಾಟದಿಂದ ಮನೋವಿಕಾಸ. ಕಿತ್ತಾಟದಿಂದ ಮನೋವಿಕಾರ.

ಡಾ.ವಿ. ಪುಗಳೇಂದಿ, ಬಳ್ಳಾರಿ
*ಅನೈತಿಕವಾಗಿ ಹುಟ್ಟದ ಮಗುವನ್ನು ತೊಟ್ಟಿಗೆ ಎಸೆದು, ಅಕ್ರಮ ಹಣವನ್ನು ಪೆಟ್ಟಿಗೆಯಲ್ಲಿ ಹಾಕಿಕೊಳ್ಳುತ್ತಾರಲ್ಲಾ?*
ಕಸ ವಿಂಗಡಣೆಯ ನಿಯಮ! ಉಪಯೋಗಕ್ಕೆ ಬಾರದ್ದು ಹೊರಕ್ಕೆ, ಮರುಬಳಕೆ ಆಗುವುದು ಒಳಕ್ಕೆ!

ಶ್ರೀಧರ್ ಡಿ ರಾಮಚಂದ್ರ, ತುರುವನೂರು
*ದೇವರ ಹೆಸರಿನಲ್ಲಿ ವಾರದ ದಿನಗಳಲ್ಲಿ ಉಪವಾಸ ಆಚರಿಸುವವರಿಗೆ ಏನನ್ನ ಬೇಕು?*
ಏನು ಬೇಕಾದರೂ ಅನ್ನಿ. ಆದರೆ ದೂರ ನಿಂತು ಅನ್ನಿ. ಹಸಿದವರಿಗೆ ಕೋಪ ಹೆಚ್ಚು.

ಸಿ.ನಾಗರಾಜ, ಅರದೋಟ್ಟು
*ಹುಡುಗಿಯೊಬ್ಬಳು ತನ್ನ ಜೀವನ ಹಳೆ ಪೇಪರ್, ಹಳೆ ಕಬ್ಬಿಣವಾಗಿದೆ ಎನ್ನುತ್ತಾಳೇಕೆ?*
ಮೊದಲು ಒಂದೇ ಅರ್ಹತೆ ಇತ್ತಂತೆ. ಈಗ ವಿವಿಧೋದ್ದೇಶ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಅರ್ಹಳಂತೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಮುದುಕರು ಹುಡುಗರಾಗಲು ಹೇರ್ ಡೈ ಹಚ್ಚುತ್ತಾರೆ. ಪ್ರಾಯದ ಹುಡುಗರು ಏನು ಹಚ್ಚಬೇಕು?*
ಪ್ರಾಯದ ಹುಡುಗಿಯರಿಗೆ ಫೋನ್ ಹಚ್ಚಬೇಕು.

ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು
*ಹೆಣ್ಣು ವಿದ್ಯೆ ಉದ್ಯೋಗ, ಸಂಬಳದಲ್ಲಿ ಗಂಡನಿಗೆ ಸರಿಸಮಳಾಗಿದ್ದರೂ ತಗ್ಗಿ ಬಗ್ಗಿ ನಡೆ ಎಂದೇಕೆ ಹೇಳುವರು?*
ಡಬ್ಲ್ಯೂಡಬ್ಲ್ಯೂಎಫ್ ತಂತ್ರ. ತಗ್ಗಿ ಬಗ್ಗಿದರೆ ಎದುರಾಳಿಯನ್ನು ಫ್ಲಿಪ್ ಮಾಡಿ ಎಸೆಯುವುದು ಸುಲಭ.

ಕುಸುಮ ಶಿವಕುಮಾರ್, ಮೈಸೂರು
*ಜಾತಿಬುದ್ಧಿ ಎಂದರೇನು?*
ಟ್ರೇಡ್ ಮಾರ್ಕ್. ಉದಾಹರಣೆಗೆ ಮಂತ್ರಿಗಳಿಗೆ ಕಂತ್ರಿಬುದ್ಧಿಯೇ ಜಾತಿಬುದ್ಧಿ.

## ಬಹುಮಾನಿತ ಪ್ರಶ್ನೆ

ಮಲ್ಲನಗೌಡ ಪಾಟೀಲ, ರಾಮದುರ್ಗ
*ಬೆಂಗಳೂರಿನ ವಿಧಾನಸೌಧಕ್ಕೂ, ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೂ ವ್ಯತ್ಯಾಸವೇನು?*
ಹೆಚ್ಚೇನಿಲ್ಲ. ಇದು ರೆಸ್ಟ್ ಹೌಸ್, ಅದು ಗೆಸ್ಟ್ ಹೌಸ್.

ಕೆ.ವಿ.ಎಸ್. ಕಾಳೀಹುಂಡಿ, ಮೈಸೂರು
*ಮಾತು-ಮೌನಕ್ಕಿಂತ, ಬೆಳ್ಳಿ-ಬಂಗಾರಕ್ಕೆ ಜನ ಹೆಚ್ಚು ಮನ್ನಣೆ ನೀಡುತ್ತಿದ್ದಾರಲ್ಲಾ...?*
ಸರಿಯೇ. ಮಾತು–ಮೌನ ಕುತ್ತಿಗೆಗೆ ಬಂದರೆ ಆಪತ್ತು; ಬೆಳ್ಳಿ–ಬಂಗಾರ ಕುತ್ತಿಗೆಗೆ ಬಂದರೆ ಸಂಪತ್ತು.

ಆರ್. ಮಧುಸೂದನ್, ಹಾಸನ
*ದೊಡ್ಡವಳಾದ ಮೇಲೂ ಆ ಚೆಲುವೆ ಸ್ನಾನಕ್ಕೆ ಜಾನ್ಸನ್ & ಜಾನ್ಸನ್ ಬೇಬಿ ಸೋಪನ್ನೇ ಬಳಸುತ್ತಾಳಲ್ಲಾ?*
ತಪ್ಪಿಲ್ಲ. ಅವಳನ್ನು ಕಂಡ ಡ್ಯೂಡ್ಸ್ ಹಾಯ್ ಬೇಬಿ ಅನ್ನುತ್ತಾರಲ್ಲ!

ರತ್ನಜ, ಮೈಸೂರು
*ಈಗೀಗ ಹುಡುಗಿಯರು ಬಟ್ಟೆಗಳನ್ನು ಮೈಗೆ ಅಂಟಿಸಿಕೊಂಡು ಓಡಾಡುತ್ತಿದ್ದಾರಲ್ಲಾ ರಾಂಜಿ?*



ಬಟ್ಟೆ ಸಡಿಲವಾದರೆ ಮೈ ಅರಳಿ ಡುಮ್ಮಿಯರಾಗಿಬಿಡುತ್ತೇವೆ ಎಂಬ ಭಯವಂತೆ.

ಪಿ.ಜೆ. ರಾಘವೇಂದ್ರ, ಮೈಸೂರು
*ಪುತ್ರಶೋಕಂ ನಿರಂತರಂ; ಪುತ್ರ ಪ್ರೇಮಂ?*
ಕಾಂಗ್ರೆಸ್, ಜೆಡಿಎಸ್‌ನಂತಹ ಪಕ್ಷಗಳ ನಿರ್ಮಾಣಂ.

ವಿ. ಹಮೀದ್, ವಿಟ್ಲ
*ಸರಕಾರಿ ಶಾಲೆಗಳೆಂದರೆ ಪೋಷಕರಿಗೆ ಅನಾಸಕ್ತಿ ಇರುವುದು ಏಕೆ?*
ಲಕ್ಷ ತೆಗೆದುಕೊಳ್ಳದವರು ಲಕ್ಷ್ಯ ನೀಡುವುದಿಲ್ಲ ಎಂಬ ಕಲ್ಪನೆ.

■ ರಾಮ್